# ಮಕ್ಕಳ ಹಕ್ಕುಗಳ ಅರಿವಿಗೊಂದು ಬೆಳಕಿಂಡಿ



ನವೆಂಬರ್ ತಿಂಗಳು ಚಿಣ್ಣರ ಪಾಲಿಗೆ ಸಂಭ್ರಮದ ತಿಂಗಳು. ನ. 14ರ 'ಮಕ್ಕಳ ದಿನಾಚರಣೆ'ಯನ್ನು ಎಳೆಯರ ಸಂಭ್ರಮವನ್ನಾಗಿ ಆಚರಿಸಿದರೆ ಸಾಲದು, ಈ ಸಂದರ್ಭ ಮಕ್ಕಳ ಹಕ್ಕುಗಳ ಅರಿವಿಗೆ ಪ್ರೇರಣೆಯೂ ಆಗಬೇಕು.

**■ ಎನ್.ವಿ. ವಾಸುದೇವ ಶರ್ಮಾ**
ಚೈಲ್ಡ್ ರೈಟ್ಸ್ ಟ್ರಸ್ಟ್



'ವಿಶ್ವದ ಏಕೈಕ ಭಾಷೆ ಮಕ್ಕಳ ಅಳು' ಎಂದ ಎಗ್ಲಾಂಟೈನ್ ಜೆಬ್

ಮಕ್ಕಳ ದಿನಾಚರಣೆ ಆಚರಿಸಲು ಸಿದ್ಧರಾಗುತ್ತಿದ್ದೀರಾ? ಬನ್ನಿ, ಈ ದಿನಾಚರಣೆಯ ಹಿಂದಿನ ಕತೆಯನ್ನು ಕೇಳೋಣ.

165 ವರ್ಷಗಳ ಹಿಂದೆ, 1856ರಲ್ಲಿ ರೆವೆರೆಂಡ್ ಡಾ. ಚಾರ್ಲ್ಸ್ ಲಿಯೋನಾರ್ಡ್ ಎನ್ನುವವರು ಅಮೆರಿಕದ ಮೆಸ್ಸಾಚುಸೆಟ್ಸ್‌ನಲ್ಲಿ ಜೂನ್ ತಿಂಗಳ ಎರಡನೇ ಭಾನುವಾರವನ್ನು ಮಕ್ಕಳ ದಿನಾಚರಣೆ ಎಂದು ಆಚರಿಸಲು ಆರಂಭಿಸಿದರು. ಅವರು ಆ ದಿನವನ್ನು 'ಗುಲಾಬಿ ಹೂಗಳ ದಿನ, ಅಂತೆಯೇ ಮಕ್ಕಳ ದಿನ' ಎಂದು ಹೆಸರಿಸಿ ವಿಶೇಷ ಕಾರ್ಯಕ್ರಮಗಳನ್ನು ನಡೆಸಿದರಂತೆ. ಪೋಷಕರು ತಮ್ಮ ಮಕ್ಕಳಿಗಾಗಿ ಸಮಯವನ್ನು ಮೀಸಲಿಡಬೇಕು ಮತ್ತು ಮಕ್ಕಳಿಗೆ ವಿಶೇಷವಾದ ಚಟುವಟಿಕೆಗಳನ್ನು ಆಚರಿಸಬೇಕೆಂಬುದು ಆ ಆಚರಣೆಯ ಆಶಯವಾಗಿತ್ತು.

ಟರ್ಕಿ ದೇಶದ ಸರ್ಕಾರ ಮಕ್ಕಳ ದಿನಾಚರಣೆಯೆಂದು ಏಪ್ರಿಲ್ 23ನ್ನು 1920ರಲ್ಲಿ ಅಧಿಕೃತವಾಗಿ ಘೋಷಿಸಿತು. ಆ ವೇಳೆಗೆ ಮೊದಲನೇ ಮಹಾಯುದ್ಧ ಮುಗಿದಿತ್ತು. ಟರ್ಕಿಯಲ್ಲಿ ಸ್ವಾತಂತ್ರ್ಯ ಹೋರಾಟ ನಡೆದಿತ್ತು. ಆ ಹೋರಾಟಗಳಿಂದಾಗಿ ಅನಾಥರಾದ ಮಕ್ಕಳ ಹಿತ ಕಾಪಾಡಲು ಕೈಗೊಳ್ಳಬೇಕಾದ ವಿಶೇಷ ಕ್ರಮಗಳನ್ನು ನೆನಪಿಸಿಕೊಳ್ಳಲು ಟರ್ಕಿ 'ಮಕ್ಕಳ ದಿನ'ವನ್ನು ಆಚರಿಸಲಾರಂಭಿಸಿತು.

ಜಾಗತಿಕ ಮಕ್ಕಳ ದಿನಾಚರಣೆ ನಡೆಸಲು ಪ್ರೇರೇಪಣೆಯಾದುದು ಮಕ್ಕಳ ಹಕ್ಕುಗಳ ಪರ ಹೋರಾಟ ನಡೆಸುತ್ತಿದ್ದ ಇಂಗ್ಲೆಂಡಿನ ಎಗ್ಲಾಂಟೈನ್ ಜೆಬ್ ಅವರ ಚಿಂತನೆಗಳು. ಮೊದಲ ಜಾಗತಿಕ ಮಹಾಯುದ್ಧದ ಘೋರ ಪರಿಣಾಮ ಅತಿ ಹೆಚ್ಚು ಬಾಧಿಸಿದ್ದು ಮಕ್ಕಳನ್ನೇ ಎಂಬುದು ಆಕೆಯ ವಾದ. ತನ್ನ ದೇಶ ಇಂಗ್ಲೆಂಡ್ ಮಧ್ಯ ಯೂರೋಪಿನ ಮಕ್ಕಳ ನೆಮ್ಮದಿ ಕೆಡಲು ಕಾರಣ ಎಂದು ಪ್ರತಿಪಾದಿಸಿದರು. ಮಹಾಯುದ್ಧದ ಸಮಯದಲ್ಲಿ ಮತ್ತು ಯುದ್ಧ ಮುಗಿದ ಮೇಲೂ ಯೂರೋಪಿನ ಇತರ ದೇಶಗಳಿಗೆ ಅವರೆಲ್ಲ ಶತ್ರುಗಳು ಎಂಬಂತೆ ಆಹಾರ, ಔಷಧಿ ತಲುಪದ ಹಾಗೆ ತಡೆ ಒಡ್ಡಲಾಗುತ್ತಿದೆ, ಹೀಗಾಗಿ ಮಕ್ಕಳು ಆಹಾರ–ಪೋಷಣೆಗಳಿಲ್ಲದೆ ರೋಗಗಳಿಗೆ ಬಲಿಯಾಗಿ ನಿತ್ರಾಣರಾಗಿದ್ದಾರೆ ಎಂದು ಆಕೆ ತನ್ನದೇ ದೇಶದ ಸರ್ಕಾರದ ಮೇಲೆ ಆಪಾದಿಸಿದರು. ಯೂರೋಪಿನ ಎಲ್ಲ ಮಕ್ಕಳ ನೆಮ್ಮದಿಗಾಗಿ ಆಕೆ ನಡೆಸಿದ ಪ್ರಯತ್ನಗಳ ಫಲವಾಗಿ ಎಗ್ಲಾಂಟೈನ್ ಜೆಬ್ ಪ್ರತಿಪಾದಿಸಿದ 'ಮಕ್ಕಳ ಹಕ್ಕುಗಳ ಘೋಷಣೆ'ಯನ್ನು ಆಗಿನ 'ಲೀಗ್ ಆಫ್ ನೇಷನ್ಸ್' 1924ರ ಸೆ. 26ರಂದು ಜಿನೀವಾದಲ್ಲಿ ನಡೆದ ಸಾಮಾನ್ಯ ಸಭೆಯಲ್ಲಿ ಒಪ್ಪಿಕೊಂಡಿತು. ಅದರಂತೆ ಜಗತ್ತಿನ ಎಲ್ಲೆಡೆ ಮಕ್ಕಳಿಗೆಂದೇ ವಿವಿಧ ಕಾರ್ಯಕ್ರಮಗಳನ್ನು ಯೋಜಿಸಲಾಗಿತ್ತು. 1925ರಲ್ಲಿ ಜಿನೀವಾದಲ್ಲಿ ನಡೆದ 'ಮಕ್ಕಳ ಕಲ್ಯಾಣ